ಎಂ ವಿ ಸಿ ನಂಃ 390/2024
ಆರ್ ಡಬ್ಲ್ಯುಃ 2

<u>ದಿನಾಂಕಃ**09-01-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಖ್ಯ ವಿಚಾರಣೆ ಮಾಡಲು ಅನುಮತಿಯನ್ನು ನೀಡಲಾಯಿತು.</u>

<u>ಮುಖ್ಯವಿಚಾರಣೆಃ **3** ನೇ ಎದುರುದಾರರ ಪರ ಶ್ರೀ ಜೆ ಪಿ ಎಲ್ ವಕೀಲರಿಂದಃ</u>

ನಾನು ಈ ಕೇಸಿನಲ್ಲಿ 3 ನೇ ಎದುರುದಾರರ ಅಪ್ಪಣೆಯ ಸಹಾಯಕ ಕಾನೂನು ವ್ಯವಸ್ಥಾಪಕನೆಂದು ಕರ್ತವ್ಯ ನಿರ್ವಹಿಸುತ್ತಿದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

| | | |
|---|---|---|
| 1 | ನಮ್ಮ ಕಂಪನಿಯವರು ನೀಡಿದ ಅಥೋರೈಸೇಶನ್ ಪ್ರತಿ | ನಿಆರ್- 6 |
| 2 | ವಿಮಾ ಪಾಲಿಸಿಯ ಪ್ರತಿ | ನಿಆರ್ -7 |

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಸಿ ವಿ ಎಸ್ ವಕೀಲರಿಂದ ಃ</u>

ನಾನು ಒಂದು ವರ್ಷದಿಂದ 3 ನೇ ಎದುರುದಾರರ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಾ ಇರುತ್ತೇನೆ. ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ನಮ್ಮ ಕಂಪನಿಯಿಂದ ಆಂತರಿಕ ತನಿಖೆಯನ್ನು ಮಾಡಿರುವುದಿಲ್ಲ ಆದರೆ ಪೊಲೀಸ್ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಪೊಲೀಸ್ ದಾಖಲೆಗಳ ಪ್ರಕಾರ ಅಪಘಾತ ಆದ ದಿವಸ 1 ನೇ ಎದುರುದಾರರು ಬೈಕನ್ನು ಚಲಾಯಿಸುತ್ತಿದ್ದರು ಎಂದರೆ ಸರಿ. ಅದೇ ರೀತಿ 1 ನೇ ಎದುರುದಾರರು ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅವರಿಗೆ ಚಾಲಕನ ಪರವಾನಿಗೆ ಪತ್ರ ಇಲ್ಲ ಎಂದು ಅಂತಿಮ ವರದಿಯಲ್ಲಿ ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಆರ್ 7 ರಲ್ಲಿ ಹಿಂಬದಿಯ ಸವಾರರಿಗೆ ವಿಮಾ ಪಾಲಿಸಿ ಅನ್ವಯ ಆಗುವುದಿಲ್ಲ ಎಂಬ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ಆ್ಯಕ್ಟ್ ಪಾಲಿಸಿ ಇರುತ್ತದೆ ಎಂದು ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ನಿಆರ್ 7 ರಲ್ಲಿ ಆ್ಯಕ್ಟ್ ಪಾಲಿಸಿ ಎಂದು ನಮೂದು ಇರುವುದಿಲ್ಲ ಸಾಕ್ಷಿ ಮುಂದುವರೆದು 3 ನೇ ವ್ಯಕ್ತಿಗೆ ಆದ ನಷ್ಟದ ಬಗ್ಗೆ ಉಲ್ಲೆಖ ಇರುತ್ತದೆ ಎಂದು ಉತ್ತರಿಸುತ್ತಾರೆ.

2.ನಿಆರ್ 7 ರಲ್ಲಿ ಪ್ಯಾಕೇಜ್ ಪಾಲಿಸಿ ಎಂದು ನಮೂದು ಇರುತ್ತದೆ. ಪ್ಯಾಕೇಜ್ ಪಾಲಿಸಿ ಒಂದು ವರ್ಷಕ್ಕೆ ಮಾತ್ರ ಅನ್ವಯ ಆಗುತ್ತದೆ ಎಂಬ ಬಗ್ಗೆ ಉಲ್ಲೇಖ ಇರುತ್ತದೆ ಸಾಕ್ಷಿ ಮುಂದುವರೆದು ನಾವು ಒ ಡಿ ಎಂದು ತೆಗೆದುಕೊಳ್ಳದ ಕಾರಣ ಒಂದು ವರ್ಷದ ನಂತರ ಅದು ಅನ್ವಯ ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ವಿಮಾ ಕಂಪನಿಯಿಂದ ನಾವು 4 ವಿಧದ

ವಿಮಾ ಪಾಲಿಸಿಗಳನ್ನು ಗ್ರಾಹಕರಿಗೆ ನೀಡುತ್ತೇವೆ. ಸ್ಟಾಂಡರ್ಡ್ ಪಾಲಿಸಿ ಯನ್ನು 3rd ಪಾರ್ಟಿ ಕವರೇಜ್ ಕೊಡಲು ಬರುವುದಿಲ್ಲ ಅದರೆ ಬಂಡಲ್ ಪಾಲಿಸಿ ಯಲ್ಲಿ ಮೊದಲನೆ ವರ್ಷ ಓನ್ ಡ್ಯಾಮೇಜ್ ಕವರ್ ಆಗುತ್ತಿದ್ದು ನಂತರ ಮೂರು ವರ್ಷ 3rd ಪಾರ್ಟಿ ಕವರೇಜ್ ಒಳಗೊಳ್ಳುತ್ತದೆ ಅದು ಸಂಬಂಧಿಸಿದ ವಾಹನದಲ್ಲಿ ಇರುತ್ತದೆ. ಆ್ಯಕ್ಟ್ ಪಾಲಿಸಿಯಲ್ಲಿ ಮೂರನೆ ವ್ಯಕ್ತಿಗೆ ಆದ ನಷ್ಟವನ್ನು ಭರ್ತಿ ಮಾಡಿಕೊಡುವ ಹೊಣೆ ಗಾರಿಗೆ ವಿಮಾ ಕಂಪನಿಯ ಮೇಲೆ ಇರುತ್ತದೆ. ಅದೆ ರೀತಿ ಪ್ಯಾಕೇಜ್ ಪಾಲಿಸಿಯಲ್ಲಿ ಮೂರನೆ ವ್ಯಕ್ತಿ ಹಾಗೂ ವಾಹನದ ಮಾಲೀಕರಿಗೆ ಆದ ನಷ್ಟವನ್ನು ಭರ್ತಿ ಮಾಡಿಕೊಡುವ ಹೊಣೆಗಾರಿಕೆ ವಿಮಾ ಕಂಪನಿಯ ಮೇಲೆ ಇರುತ್ತದೆ ಅದು ಪ್ರೀಮಿಯಂ ಕಟ್ಟುವುದರ ಮೇಲೆ ಇರುತ್ತದೆ ಎಂದು ಉತ್ತರಿಸುತ್ತಾರೆ. ಪ್ಯಾಕೇಜ್ ಪಾಲಿಸಿಯಲ್ಲಿ ಎಲ್ಲಾ ವಿಧದ ರಿಸ್ಕ್ ಗಳು ಕವರ್ ಅಗುತ್ತದೆಯೆ ಎಂದರೆ ಸಾಕ್ಷಿ ಪ್ರೀಮಿಯಂ ಪಡೆದಿದ್ದರೆ ಒಳಗೊಳ್ಳುತ್ತದೆ ಎಂದು ಉತ್ತರಿಸುತ್ತಾರೆ. ಪ್ಯಾಕೇಜ್ ಪಾಲಿಸಿಯಲ್ಲಿ ಒಮ್ಮೆ ಪ್ರೀಮಿಯಂ ಅನ್ನು ಕ್ಟಟಿದ ನಂತರ ಎಲ್ಲಾ ರಿಸ್ಕ್ ಗಳನ್ನು ಒಳಗೊಂಡಿರುತ್ತದೆ extra ಪ್ರೀಮಿಯಂ ಕಟ್ಟುವ ಅವಶ್ಯಕತೆ ಬರುವುದಿಲ್ಲ ಎಂದರೆ ಸರಿಯಲ್ಲ.

3. 1 ನೇ ಎದುರುದಾರರು ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. 2 ನೇ ಎದುರುದಾರರು ನಮ್ಮ ವಿಮಾ ಕಂಪನಿಯಲ್ಲಿ ಪ್ಯಾಕೇಜ್ ಪಾಲಿಸಿ ಪಡೆದುಕೊಂಡಿರುವುದರಿಂದ ನಾನು ಪರಿಹಾರ ಹಣವನ್ನು ನೀಡಿ 2 ನೇ ಎದುರುದಾರರಿಂದ ನಷ್ಟ ಭರ್ತಿ ಪಡೆಯಲು ಬರುತ್ತದೆ ಎಂದರೆ ಸರಿಯಲ್ಲ. 2 ನೇ ಎದುರುದಾರರ ವಾಹನಕ್ಕೆ ಪ್ಯಾಕೇಜ್ ಪಾಲಿಸಿ ನೀಡಿದ್ದು ನಮ್ಮ ಬಾಧ್ಯತೆ ಇಂದ ತಪ್ಪಿ ಸಿಕೊಳ್ಳುವುದಕ್ಕೋಸ್ಕರ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನ ಚಾಲನಾ ಪರವಾನಿಗೆ ಪತ್ರ ಇಲ್ಲದೇ ಇದ್ದರು ನಾವು ಪರಿಹಾರ ಹಣ ನೀಡಿ ನಂತರ ಅವರಿಂದ ನಷ್ಟ ಭರ್ತಿ ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ